# ಲೇಖಕರ ಪಾತ್ರ ಹಿರಿದು

**ರಾಮು ರಾವ್ ಜಿ.**
**ಸ್ಟಾರ್ ಸುವರ್ಣ ‘ಕಾವೇರಿ ಕನ್ನಡ ಮೀಡಿಯಂ’ ಹೆಡ್ ಮಾಸ್ಟರ್**



◆ **ಕನ್ನಡ ಶಾಲೆಯಲ್ಲಿ ನಿಮ್ಮ ಪಾತ್ರವೇನು?**

ಕಾವೇರಿಯ ತಂದೆಗೆ ತಮ್ಮೂರು ನೆಲ್ಲಿಕಟ್ಟೆಯಲ್ಲಿ ಒಂದು ಶಾಲೆಯನ್ನು ತೆರೆಯಬೇಕು ಎನ್ನುವ ಆಸೆ. ಅವರ ಆಸೆಯಂತೆ ಜನರ ಸಹಕಾರದಿಂದ ಶಾಲೆ ಆರಂಭವಾಗುತ್ತದೆ. ಅದರ ನಿರ್ಮಾಣ ಹಂತದಲ್ಲಿ ನನ್ನದೂ ಪ್ರಮುಖ ಪಾತ್ರ ಇದೆ. ನಂತರ ನಮ್ಮ ಸಹಕಾರದಿಂದ ಶಾಲೆ ನಡೆಯುತ್ತಿದೆ. ಆ ಶಾಲೆಯಲ್ಲಿ ನಾನೇ ಮುಖ್ಯೋಪಾಧ್ಯಾಯ. ಕಾವೇರಿ ಅಷ್ಟರಲ್ಲಿ ಅಮ್ಮ–ಅಪ್ಪನನ್ನು ಕಳೆದುಕೊಂಡಿರುತ್ತಾಳೆ. ತನ್ನ ತಂದೆಯ ಆಸೆಯನ್ನು ಸಾಕಾರಗೊಳಿಸುವ ಸಂಬಂಧ ಆಕೆ ಶಿಕ್ಷಕರ ತರಬೇತಿ ಪಡೆದು ಬಂದು ಅದೇ ಊರಲ್ಲಿ ನೆಲೆಸುತ್ತಾಳೆ.

◆ **ಬಣ್ಣ ಹಚ್ಚಿಕೊಳ್ಳುವ ಆಸೆ ಮೂಡಿದ್ದು ಯಾವಾಗ?**

ಅದು ಆಕಸ್ಮಿಕ. 1965ರ ಆಸುಪಾಸು ಇರಬಹುದು. ಚಿಕ್ಕಬಳ್ಳಾಪುರದ ಸರ್ ಎಂ. ವಿಶ್ವೇಶ್ವರಯ್ಯ ಪ್ರೌಢಶಾಲೆಯಲ್ಲಿ ಓದುತ್ತಿದ್ದೆ. ಆ ಸಮಯದಲ್ಲಿ ರಾಜ್ ಕುಮಾರ್ ಅವರ ‘ನಾಂದಿ’ ಸಿನಿಮಾ ತಂಡ ಚಿತ್ರೀಕರಣಕ್ಕೆ ನಂದಿಬೆಟ್ಟಕ್ಕೆ ಬಂದಿತ್ತು. ಅಣ್ಣಾ ಅದರಲ್ಲಿ ಶಿಕ್ಷಕರ ಪಾತ್ರ ಮಾಡಿದ್ದರು. ಅವರು ಮಕ್ಕಳನ್ನು ನಂದಿಬೆಟ್ಟಕ್ಕೆ ಪ್ರವಾಸಕ್ಕೆಂದು ಕರೆದುಕೊಂಡು ಬಂದಿರುತ್ತಾರೆ. ಆ ಸನ್ನಿವೇಶಕ್ಕೆ ಅವರಿಗೆ 30 ಮಕ್ಕಳು ಬೇಕಿತ್ತು. ನಮ್ಮ ಶಾಲೆಯ ಮಕ್ಕಳನ್ನೇ ಕರೆದುಕೊಂಡು ಹೋಗಿದ್ದರು. ಆ ಮಕ್ಕಳ ಬಳಗದಲ್ಲಿ ನಾನೂ ಇದ್ದೆ. ‘ನಮ್ಮ ತಾಯಿ ಭಾರತಿ...’ ಹಾಡು ಅದರಲ್ಲಿತ್ತು.

ಆಮೇಲೆ ಅದೆಲ್ಲ ಮರೆತೇ ಹೋಯಿತು. ವಿದ್ಯಾಭ್ಯಾಸ ಮಾಡಿ, ಆನಂತರ ಅದೇ ಶಾಲೆಗೆ ನಾನೂ ಶಿಕ್ಷಕನಾದೆ. ಆಗಿನಿಂದಲೂ ರಂಗಭೂಮಿಯ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದೆ. ಅದನ್ನು ಶಾಲೆಯ ರಂಗಚಟುವಟಿಕೆಗೂ ವಿಸ್ತರಿಸಿಕೊಂಡಿದ್ದೆ. ದೂರದರ್ಶನ ಕೇಂದ್ರ ಬೆಂಗಳೂರಿಗಿಂತ ಮೊದಲು ಹೈದರಾಬಾದ್‌ನಲ್ಲಿ ಆರಂಭವಾಗಿತ್ತು. ಆಗ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಮಾತ್ರ ನೆಟ್‌ವರ್ಕ್ ಸಿಗ್ತಾ ಇತ್ತು. ಅವರಿಗಾಗಿ ವಾರದಲ್ಲಿ ಮೂರು ನಾಲ್ಕು ಗಂಟೆ ಕಾರ್ಯಕ್ರಮ ಪ್ರಸಾರ ಆಗುತ್ತಿತ್ತು. 1980ರ ಹೊತ್ತಿಗೆ ಆ ಕೇಂದ್ರಕ್ಕೆ ದ.ರಾ. ಬೇಂದ್ರೆಯವರ ‘ಸಾಯೋ ಆಟ’ ನಾಟಕವನ್ನು ನಾವು ತೆಗೆದುಕೊಂಡು ಹೋಗಿದ್ದೆವು. ಆಗಲೂ ನಾನು ನಟ ಆಗುತ್ತೇನೆ ಎನ್ನುವ ಭಾವನೆ ಇರಲಿಲ್ಲ. ಸಣ್ಣಪುಟ್ಟ ರಂಗಚಟುವಟಿಕೆಗಳನ್ನು ಮಾಡುತ್ತಿದ್ದೆ. ನಿವೃತ್ತಿಯ ನಂತರ ಅಭಿನಯದಲ್ಲಿ ಅಭಿರುಚಿ ಇದೆ. ಈ ಕ್ಷೇತ್ರದಲ್ಲಿ ಏಕೆ ಮುಂದುವರಿಯಬಾರದು ಎಂದು ಅನಿಸಿತು. ಸ್ನೇಹಿತರೊಬ್ಬರ ಸಲಹೆಯಂತೆ ‘ಬೃಂದಾವನ’ದಲ್ಲಿ ಪುಟ್ಟ ಅವಕಾಶ ಸಿಕ್ಕಿತು. ನಂತರ ಫೋಟೊ ತೆಗೆದು ಪ್ರೊಡಕ್ಷನ್ ಮ್ಯಾನೇಜರ್‌ಗಳಿಗೆ ಕೊಟ್ಟು ಬಂದೆ. ಅದರಿಂದ ಅವಕಾಶಗಳು ಸಿಗ್ತಾ ಹೋದವು. ನಂತರ ಅನೇಕ ಸಿನಿಮಾಗಳಲ್ಲಿ ನಟಿಸಲು ಸಾಧ್ಯ ಆಯಿತು. ಮೊದಲ ಸಿನಿಮಾ ‘ಕೋಟಿ’. ಕನ್ನಡದ ಪ್ರಮುಖ ನಟರ ಜೊತೆ ಅಭಿನಯಿಸಲು ಅವಕಾಶ ಸಿಕ್ಕಿದೆ.

◆ **ನಿಮ್ಮ ಪ್ರಕಾರ ಧಾರಾವಾಹಿ ಅಂದರೆ ಏನು?**

ವೀಕ್ಷಕ ವಲಯದಲ್ಲಿ ಧಾರಾವಾಹಿಯನ್ನು ಕೆಲವರು ತುಂಬ ಹಚ್ಚಿಕೊಂಡಿದ್ದಾರೆ. ಕೆಲವೊಂದು ಕಥೆಗಳು ಅಷ್ಟೇ ಚೆನ್ನಾಗಿರುತ್ತವೆ. ಉತ್ತಮ ಜೀವನಕ್ಕೆ ಅಳವಡಿಸಿಕೊಳ್ಳಬಹುದಾದ ಕೆಲವೊಂದು ಸಂಗತಿಗಳನ್ನು ಅವು ಹೇಳುತ್ತವೆ. ಕೆಲವೊಂದು ಕೇವಲ ಮನರಂಜನೆಯ ಉದ್ದೇಶದಿಂದಲೇ ರಚನೆ ಆಗುತ್ತವೆ. ಇನ್ನೂ ಕೆಲವು ಅಲ್ಲಲ್ಲಿ ದ್ವಂದ್ವಾರ್ಥದ ಸನ್ನಿವೇಶಗಳನ್ನು ತರುತ್ತವೆ. ಇನ್ನೂ ಕೆಲವು ಮನೆ ಮುರಿಯುವ ಅತ್ತೆ– ಸೊಸೆ ಜಗಳ, ಕುಟುಂಬ ಕಲಹವನ್ನೇ ದೊಡ್ಡದಾಗಿ ಬಿಂಬಿಸುತ್ತವೆ. ಈ ಮಾದರಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಏನೇ ಆದರೂ ಅದರಲ್ಲಿ ಒಳ್ಳೆಯ ಅಂಶಗಳೂ ಇರುತ್ತವೆ, ಕೆಟ್ಟ ಅಂಶಗಳೂ ಇರುತ್ತವೆ. ಅದನ್ನು ನಾವು ಹೇಗೆ ತೆಗೆದುಕೊಳ್ಳುತ್ತೇವೆ, ಅದರಲ್ಲಿ ಏನು ಆಯ್ಕೆ ಮಾಡಿಕೊಳ್ಳುತ್ತೇವೆ ಎನ್ನುವುದರ ಮೇಲೆ ನಿರ್ಧಾರವಾಗುತ್ತದೆ.

◆ **ಟೀವಿಯನ್ನು ಮಕ್ಕಳು, ಯುವಕರೂ ನೋಡಬೇಕು ಎಂದರೆ ಕಥೆ ಹೇಗಿದ್ದರೆ ಚಂದ?**

ಮನರಂಜನೆ ಬೇಕೇ ಬೇಕು. ಆದರೆ ನನ್ನ ದೃಷ್ಟಿಯಲ್ಲಿ ಸಮಾಜಮುಖಿ ಯೋಚಿಸುವ, ವೀಕ್ಷಕರಿಗೆ ಏನಾದರೂ ಪ್ರಯೋಜನ ಆಗುವ ವಿಷಯವನ್ನು ಅದು ನಿರೂಪಿಸಬೇಕು ಎಂದು ಅನ್ನಿಸುತ್ತದೆ. ವಿಶೇಷವಾಗಿ ಯುವಕರಿಗೆ ಒಳ್ಳೆಯ ಮಾರ್ಗದಲ್ಲಿ ಸಾಗುವಂತೆ ಪ್ರೇರೇಪಿಸಬೇಕು. ಮಕ್ಕಳಿಗಂತೂ ಶೈಕ್ಷಣಿಕ ಮಾದರಿಯ ಕಾರ್ಯಕ್ರಮ ಅಗತ್ಯವಾಗಿ ಬೇಕು. ಅವರಿಗೆ ಧಾರಾವಾಹಿ ಸ್ವರೂಪ ಸರಿ ಆಗುವುದಿಲ್ಲ ಎಂದೆನಿಸುತ್ತದೆ. ಅದಕ್ಕಾಗಿ ವೇದಗಣಿತ, ವಿಜ್ಞಾನ ಸಂಬಂಧಿ ಪ್ರಯೋಗ ಕಾರ್ಯಕ್ರಮಗಳನ್ನು ರೂಪಿಸಬಹುದು. ಯುವಕರಿಗೆ ದೇಶ ಪ್ರೇಮ, ಸಮಾಜ ಸೇವೆಯಲ್ಲಿ ತೊಡಗುವ ಕೆಲಸದ ಅಗತ್ಯ ತಿಳಿಸಬೇಕು. ಇದೆಲ್ಲ ಸರಿ. ಆದರೆ, ಟೀವಿ ಮೂಲತಃ ಮನರಂಜನಾ ಮಾಧ್ಯಮ. ಈ ಹಿನ್ನೆಲೆಯಲ್ಲಿ ಮೌಲ್ಯಯುತ ಕಥೆ, ತಾಂತ್ರಿಕ ಕೌಶಲ್ಯದ ನಿರ್ಮಾಣದ ಜೊತೆ ಜೊತೆಗೆ ಒಳ್ಳೆಯ ಸಂದೇಶವನ್ನು ಕಸಿಕಟ್ಟುವ ಕ್ರಿಯೆ ಹೆಚ್ಚು ಸೂಕ್ತ ಆಗಬಹುದು. ಇಲ್ಲಿ ಲೇಖಕರ ಪಾತ್ರ ಮಾತ್ರ ಬಹಳ ಹಿರಿದಾಗಿರುತ್ತೆ.

■ **ರಾಘವೇಂದ್ರ ಕೆ.**